**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆ ಇಲಾಖೆ)**

ಸಂಖ್ಯೆ: ವಾತೆಸಆ(ವೆಚ್ಚ–2)/ಸಿಆರ್–01/2017–18.

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ,
ಬೆಂಗಳೂರು, ದಿನಾಂಕ 22.04.2017.

**<u>ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ 02 /2017–18</u>**

ವಿಷಯ : ಇಲಾಖೆಯ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಇನ್ನು ಮುಂದೆ ಖಜಾನೆ–2 ರಲ್ಲಿಯೇ ಕಡ್ಡಾಯವಾಗಿ ನಿರ್ವಹಿಸುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ : ಆಇ 03 ಟಿಎಆರ್ 2016, ದಿನಾಂಕ :30.3.2016.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ :ಖ–2/ಪಿ.ಎಂ.ಯು/92/2015–16, ದಿನಾಂಕ : 11.04.2017.

***

ಕರ್ನಾಟಕ ಸರ್ಕಾರವು ಸಾರ್ವಜನಿಕ ಹಣಕಾಸಿನ ದಕ್ಷ, ಪರಿಣಾಮಕಾರಿ ಮತ್ತು ಪಾರದರ್ಶಕ ನಿರ್ವಹಣೆ ಮೂಲಕ ಹಿತಾಸಕ್ತಿದಾರರ ಹೊಣೆಗಾರಿಕೆಯನ್ನು ಹೆಚ್ಚಿಸುವ ಮೂಲಕ ರಾಜ್ಯದ ಅಭಿವೃದ್ಧಿಯನ್ನು ಸುಗಮಗೊಳಿಸುವ ಉದ್ದೇಶದಿಂದ ಒಂದು ಸಮಗ್ರ ಹಣಕಾಸು ನಿರ್ವಹಣೆಯ ವ್ಯವಸ್ಥೆಯಾದ ಖಜಾನೆ–2 ನ್ನು 2016–17 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುತ್ತದೆ.

2. ಸರ್ಕಾರದ ಉಲ್ಲೇಖ (1) ರ ಆದೇಶದಂತೆ ದಿನಾಂಕ : 01.04.2016 ರಿಂದ ಜಾರಿಗೆ ಬರುವಂತೆ ವಾಣಿಜ್ಯ ತೆರಿಗೆಗಳ ಇಲಾಖೆಯೂ ಸೇರಿದಂತೆ ರಾಜ್ಯದ 36 ಇಲಾಖೆಗಳು ತಮ್ಮ ಆರ್ಥಿಕ ಚಟುವಟಿಕೆಗಳಾದ ಜಮೆ, ಪಾವತಿ, ಠೇವಣಿ ಖಾತೆ ಇವುಗಳ ನಿರ್ವಹಣೆ, ಲೆಕ್ಕಗಳ ಸಮನ್ವಯ ಮುಂತಾದ ಹಣಕಾಸಿನ ವಹಿವಾಟುಗಳನ್ನು ಖಜಾನೆ–2 ರಲ್ಲಿ ನಿರ್ವಹಿಸಲು ಆದೇಶಿಸಿರುತ್ತದೆ. ಅಲ್ಲದೇ ಸದರಿ ಇಲಾಖೆಗಳು ತಮ್ಮ ಆರ್ಥಿಕ ಸೂಚನೆಗಳನ್ನು ಹೊಂದಿರುವ ಆದೇಶಗಳು, ಪತ್ರ ವ್ಯವಹಾರಗಳು, ಸುತ್ತೋಲೆಗಳು ಇತ್ಯಾದಿಗಳನ್ನು ಕಡ್ಡಾಯವಾಗಿ ಖಜಾನೆ–2 ರ ಮೂಲಕವೇ ಹೊರಡಿಸುವಂತೆ ಸರ್ಕಾರವು ನಿರ್ದೇಶಿಸಿರುತ್ತದೆ.

3. ಅದರಂತೆ ಖಜಾನೆ–2 ವ್ಯವಸ್ಥೆಯು ಸಂಪೂರ್ಣವಾಗಿ ಸ್ಥಿರೀಕರಣಗೊಂಡಿದ್ದು, 2016–17 ನೇ ಸಾಲಿನ ಆರ್ಥಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿರುವುದರಿಂದ, ಖಜಾನೆ–2 ಅನುಷ್ಠಾನಗೊಂಡಿರುವ 91 ಇಲಾಖೆಗಳು ತಮ್ಮ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಕಡ್ಡಾಯವಾಗಿ ಖಜಾನೆ–2 ರಲ್ಲಿಯೇ ನಿರ್ವಹಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು ಇವರು ಉಲ್ಲೇಖ (2) ರ ಪತ್ರದಲ್ಲಿ ನಿರ್ದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಇಲಾಖೆಯ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

(1) ಇನ್ನು ಮುಂದೆ ಖಜಾನೆ–1 ರಲ್ಲಿ ಆರ್ಥಿಕ ಚಟುವಟಿಕೆಗಳನ್ನು ನಡೆಸುವುದನ್ನು ನಿರ್ಬಂಧಿಸಲಾಗಿದೆ.

(2) ಎಲ್ಲಾ ಬಟವಾಡೆ ಅಧಿಕಾರಿಗಳೂ ತಮ್ಮ ಕಛೇರಿಗಳ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಕಡ್ಡಾಯವಾಗಿ ಖಜಾನೆ–2 ರಲ್ಲಿಯೇ ನಿರ್ವಹಿಸತಕ್ಕದ್ದು.

(3) ಖಜಾನೆ–2 ನಲ್ಲಿ ಆರ್ಥಿಕ ಚಟುವಟಿಕೆಗಳನ್ನು ನಡೆಸುವುದರಿಂದ ಯಾವುದೇ ರೀತಿಯ ವಿನಾಯಿತಿಯನ್ನೂ ಕೋರತಕ್ಕದ್ದಲ್ಲ.

4. ಮೇಲ್ಕಂಡ ಸೂಚನೆಗಳನ್ನು ಇಲಾಖೆಯ ಎಲ್ಲಾ ಬಟವಾಡೆ ಅಧಿಕಾರಿಗಳೂ ತಪ್ಪದೇ ಪಾಲಿಸುವಂತೆ ಈ ಮೂಲಕ ನಿರ್ದೇಶಿಲಾಗಿದೆ. ಎಲ್ಲಾ ವಿಭಾಗೀಯ ಮುಖ್ಯಸ್ಥರು / ಮೇಲ್ವಿಚಾರಣಾಧಿಕಾರಿಗಳು ವೈಯಕ್ತಿಕ ಗಮನಹರಿಸಿ ತಮ್ಮ ಅಧೀನದಲ್ಲಿ ಬರುವ ಬಟವಾಡೆ ಅಧಿಕಾರಿಗಳು ಮೇಲ್ಕಂಡ ಸೂಚನೆಗಳನ್ನು ಚಾಚೂ ತಪ್ಪದಂತೆ ಪಾಲಿಸುವಂತೆ ಗಮನಹರಿಸತಕ್ಕದ್ದು.

(ರಿತ್ವಿಕ್ ಪಾಂಡೆ)
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

ಇವರಿಗೆ,
ಇಲಾಖೆಯ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.